# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : **2020**

ಮಾನ್ಯ ಸದಸ್ಯರ ಹೆಸರು : ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : **27-03-2020**

ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ದೇವದಾಸಿ ಪುನರ್ವಸತಿ ಯೋಜನೆಯ ಅನ್ವಯ ಕೈಗೊಂಡ ಕಾರ್ಯಕ್ರಮಗಳೇನು; ಕಳೆದ 5 ವರ್ಷಗಳಲ್ಲಿ ಎಷ್ಟು ದೇವದಾಸಿಯರಿಗೆ ಪುನರ್ವಸತಿ ಕಲ್ಪಿಸಲಾಗಿದೆ; ದೇವದಾಸಿಯರ ಜೀವನೋಪಾಯಕ್ಕೆ ಯಾವ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) | ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಮಾಜಿ ದೇವದಾಸಿಯರ ಪುನರ್ವಸತಿಗಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>1. ದೇವದಾಸಿ ಪುನರ್ವಸತಿ ಯೋಜನೆ<br>2. ಮಾಜಿ ದೇವದಾಸಿಯರ ಮಾಸಾಶನ ಯೋಜನೆ<br>3. ಮಾಜಿ ದೇವದಾಸಿಯರ ವಸತಿ ಯೋಜನೆ.<br>ಕಳೆದ 5 ವರ್ಷಗಳಲ್ಲಿ ಒಟ್ಟು 10,421 ಮಾಜಿ ದೇವದಾಸಿಯರ ಜೀವನೋಪಾಯಕ್ಕೆ ಆದಾಯೋತ್ಪನ್ನಕರ ಚಟುವಟಿಕೆ ಕೈಗೊಳ್ಳಲು ಪ್ರೋತ್ಸಾಹಧನ ಹಾಗೂ ಸಾಲ ಸೌಲಭ್ಯವನ್ನು ಕಲ್ಪಿಸಲಾಗಿದೆ. ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ.<br>45 ವರ್ಷ ಮೀರಿದ ಎಲ್ಲಾ ಮಾಜಿ ದೇವದಾಸಿಯರಿಗೆ ಪ್ರತಿ ಮಾಹೆ ರೂ.1500/-ಗಳಂತೆ ಮಾಸಾಶನವನ್ನು ಒಟ್ಟು 29,791 ಮಾಜಿ ದೇವದಾಸಿಯರಿಗೆ ನೀಡಲಾಗುತ್ತಿದೆ. ಜಿಲ್ಲಾವಾರು ವಿವರವನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ. |
| ಆ. | ಪ್ರಸ್ತುತ ರಾಜ್ಯದಲ್ಲಿರುವ ಮಾಜಿ ದೇವದಾಸಿಯರ ಸಂಖ್ಯೆ ಎಷ್ಟು; ದೇವದಾಸಿ ಪದ್ಧತಿಯನ್ನು ನಿರ್ಮೂಲನೆಗೊಳಿಸಲು ಕೈಗೊಂಡ ಕ್ರಮಗಳೇನು; | ಪ್ರಸ್ತುತ ರಾಜ್ಯದಲ್ಲಿರುವ ಮಾಜಿ ದೇವದಾಸಿಯರ ಸಂಖ್ಯೆಯ ಮಾಹಿತಿಯನ್ನು **ಅನುಬಂಧ-3** ರಲ್ಲಿ ಲಗತ್ತಿಸಿದೆ.<br>ದೇವದಾಸಿ ಪದ್ಧತಿಯನ್ನು ನಿರ್ಮೂಲನೆ ಮಾಡಲು ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) (ತಿದ್ದುಪಡಿ) ವಿಧೇಯಕ-2009 ರಡಿಯಲ್ಲಿ ಕಾನೂನಾತ್ಮಕ ಕ್ರಮಕೈಗೊಳ್ಳಲಾಗುತ್ತಿದೆ. ಈ ಕಾಯ್ದೆಯ ಅನ್ವಯ ದೇವದಾಸಿ ಪದ್ಧತಿಯನ್ನು ನಿರ್ಮೂಲನೆ ಮಾಡಲು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ಜನಜಾಗೃತಿ ಮೂಡಿಸುವ ಸಲುವಾಗಿ ಜಾತ್ರಾ ಜಾಗೃತಿ, ಬೀದಿ ನಾಟಕಗಳು ಮತ್ತು ಕಾನೂನು ಅರಿವು ಕಾರ್ಯಕ್ರಮಗಳನ್ನು ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಹಮ್ಮಿಕೊಳ್ಳಲಾಗುತ್ತಿದೆ.<br>ಇದಲ್ಲದೇ ಮಾಜಿ ದೇವದಾಸಿ ಮಹಿಳೆಯರ ಆರೋಗ್ಯ ದೃಷ್ಟಿಯಿಂದ ಆರೋಗ್ಯ ತಪಾಸಣಾ ಶಿಬಿರಗಳನ್ನು ಸಹ ಹಮ್ಮಿಕೊಳ್ಳಲಾಗುತ್ತದೆ. |

| | | |
|---|---|---|
| ಇ. | ಮಾಜಿ ದೇವದಾಸಿಯರಿಗೆ ವಸತಿ ಯೋಜನೆಯ ಅನ್ವಯ ಇದುವರೆಗೆ ಎಷ್ಟು ಮನೆಗಳನ್ನು ವಿತರಿಸಲಾಗಿದೆ; ಎಷ್ಟು ಫಲಾನುಭವಿಗಳನ್ನು ಗುರುತಿಸಲಾಗಿದೆ;(ಜಿಲ್ಲಾವಾರು ವಿವರ ನೀಡುವುದು). | ನಿವೇಶನವುಳ್ಳ ವಸತಿರಹಿತ ಮಾಜಿ ದೇವದಾಸಿಯರಿಗೆ ವಸತಿ ಯೋಜನೆಯಡಿಯಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ 12,412 ಮಾಜಿ ದೇವದಾಸಿ ಮಹಿಳೆಯರಿಗೆ ವಸತಿ ಸೌಲಭ್ಯವನ್ನು ವಿತರಿಸಲಾಗಿದೆ. ಜಿಲ್ಲಾವಾರು ವಿವರ ಈ ಕೆಳಗಿನಂತಿದೆ. |

| ಕ್ರಸಂ | ಜಿಲ್ಲೆ | ಕ.ರಾ.ಮ.ಅ.ನಿಗಮದಿಂದ ಸೌಲಭ್ಯ ಪಡೆದ ಮಾಜಿ ದೇವದಾಸಿ ಮಹಿಳೆಯರು |
|---|---|---|
| 1 | ವಿಜಯಪುರ | 1604 |
| 2 | ಬಾಗಲಕೋಟೆ | 1124 |
| 3 | ಬೆಳಗಾವಿ | 563 |
| 4 | ಬಳ್ಳಾರಿ | 2023 |
| 5 | ಕೊಪ್ಪಳ | 1896 |
| 6 | ರಾಯಚೂರು | 2141 |
| 7 | ಯಾದಗಿರಿ | 610 |
| 8 | ಕಲಬುರ್ಗಿ | 624 |
| 9 | ಗದಗ | 556 |
| 10 | ಧಾರವಾಡ | 223 |
| 11 | ಹಾವೇರಿ | 274 |
| 12 | ಚಿತ್ರದುರ್ಗ | 97 |
| 13 | ಶಿವಮೊಗ್ಗ | 7 |
| 14 | ದಾವಣಗೆರೆ | 169 |
| | **ಒಟ್ಟು** | **11,911** |

| | | |
|---|---|---|
| ಈ. | ಮಾಜಿ ದೇವದಾಸಿಯರಿಗೆ ಕನಿಷ್ಠ ರೂ.5000 ಮಾಸಾಶನ ನೀಡುವ ಕುರಿತು ಸರ್ಕಾರದ ಮುಂದೆ ಯೋಜನೆಗಳಿವೆಯೇ; | 2020-21ನೇ ಸಾಲಿಗೆ ಮಾಜಿ ದೇವದಾಸಿಯರಿಗೆ ಮಾಸಾಶನವನ್ನು ರೂ.1500/- ಗಳಿಂದ ರೂ.2000/- ಗಳಿಗೆ ಹೆಚ್ಚಿಸುವ ಕುರಿತಾದ ಪ್ರಸ್ತಾವನೆ ಆರ್ಥಿಕ ಇಲಾಖೆಯಿಂದ ತಿರಸ್ಕೃತವಾಗಿದೆ. |

**ಸಂಖ್ಯೆ:ಮಮಇ/20/ಮಅನಿ 2020**

(ಶಶಿಕಲಾ ಅಣ್ಣಾಸಾಹೇಬ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು

# ಅನುಬಂಧ-1

**ಮಾಜಿ ದೇವದಾಸಿಯರ ಜೀವನೋಪಾಯಕ್ಕೆ ಆದಾಯೋತ್ಪನ್ನಕರ ಚಟುವಟಿಕೆ ಕೈಗೊಳ್ಳಲು ಪ್ರೋತ್ಸಾಹಧನ, ಸಾಲ ಸೌಲಭ್ಯವನ್ನು ಒದಗಿಸಿದ ವಿವರ**

| ಕ್ರ.ಸಂ | ಜಿಲ್ಲೆ | ಆದಾಯೋತ್ಪನ್ನಕರ ಚಟುವಟಿಕೆ ಕೈಗೊಳ್ಳಲು ಪ್ರೋತ್ಸಾಹಧನ, ಸಾಲ ಸೌಲಭ್ಯದ ವರ್ಷವಾರು ವಿವರ | | | | |
|---|---|---|---|---|---|---|
| | | 2014–15 | 2015–16 | 2016–17 | 2017–18 | 2018–19 |
| 1 | ರಾಯಚೂರು | 199 | 290 | 400 | 60 | 39 |
| 2 | ಕೊಪ್ಪಳ | 153 | 232 | 210 | 80 | 125 |
| 3 | ಬಳ್ಳಾರಿ | 600 | 846 | 689 | 367 | 510 |
| 4 | ಕಲಬುರ್ಗಿ | 130 | 277 | 160 | 21 | 13 |
| 5 | ಯಾದಗಿರಿ | 122 | 225 | 125 | 14 | 10 |
| 6 | ವಿಜಯಪುರ | 73 | 193 | 225 | 78 | 76 |
| 7 | ಬೆಳಗಾವಿ | 154 | 280 | 170 | 75 | 13 |
| 8 | ದಾವಣಗೆರೆ | 222 | 97 | 217 | 98 | 3 |
| 9 | ಶಿವಮೊಗ್ಗ | 5 | 3 | 2 | 0 | 0 |
| 10 | ಚಿತ್ರದುರ್ಗ | 82 | 35 | 35 | 2 | 2 |
| 11 | ಬಾಗಲಕೋಟೆ | 270 | 356 | 300 | 209 | 226 |
| 12 | ಧಾರವಾಡ | 95 | 65 | 85 | 19 | 0 |
| 13 | ಗದಗ | 162 | 109 | 90 | 20 | 5 |
| 14 | ಹಾವೇರಿ | 94 | 70 | 85 | 20 | 4 |
| | | **2361** | **3078** | **2793** | **1063** | **1126** |
| | | | | | ಒಟ್ಟು : | **10421** |

## ಅನುಬಂಧ-2

### ಮಾಜಿ ದೇವದಾಸಿಯರ ಜೀವನೋಪಾಯಕ್ಕೆ ಮಾಸಾಶನ ಸೌಲಭ್ಯವನ್ನು ಒದಗಿಸಿದ ವಿವರ

| ಕ್ರ.ಸಂ | ಜಿಲ್ಲೆ | ಮಾಸಾಶನ ನೀಡಲಾಗುತ್ತಿರುವ ಮಾಜಿ ದೇವದಾಸಿಯರ ಸಂಖ್ಯೆ |
|---|---|---|
| 1 | ರಾಯಚೂರು | 2837 |
| 2 | ಕೊಪ್ಪಳ | 2961 |
| 3 | ಬಳ್ಳಾರಿ | 7940 |
| 4 | ಕಲಬುರ್ಗಿ | 989 |
| 5 | ಯಾದಗಿರಿ | 833 |
| 6 | ವಿಜಯಪುರ | 2438 |
| 7 | ಬೆಳಗಾವಿ | 3182 |
| 8 | ದಾವಣಗೆರೆ | 1684 |
| 9 | ಶಿವಮೊಗ್ಗ | 19 |
| 10 | ಚಿತ್ರದುರ್ಗ | 226 |
| 11 | ಬಾಗಲಕೋಟೆ | 4726 |
| 12 | ಧಾರವಾಡ | 453 |
| 13 | ಗದಗ | 990 |
| 14 | ಹಾವೇರಿ | 453 |
| | ಒಟ್ಟು: | **29791** |

# ಅನುಬಂಧ-3

## ಪ್ರಸ್ತುತ ರಾಜ್ಯದಲ್ಲಿರುವ ಮಾಜಿ ದೇವದಾಸಿಯರ ಸಂಖ್ಯೆಯ ಜಿಲ್ಲಾವಾರು ವಿವರ

| ಕ್ರ.ಸಂ | ಜಿಲ್ಲೆ | 1993-94ನೇ ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟವರು | 2007-08ನೇ ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟವರು | ಒಟ್ಟು ಮಾಜಿ ದೇವದಾಸಿಯವರು | ಇದುವರೆಗೂ ಮರಣ ಹೊಂದಿದವರ ಸಂಖ್ಯೆ | ಜೀವಂತವಾಗಿರುವವರ ಸಂಖ್ಯೆ |
|---|---|---|---|---|---|---|
| 1 | ರಾಯಚೂರು | 2494 | 1455 | 3949 | 971 | 2978 |
| 2 | ಕೊಪ್ಪಳ | 4880 | 1155 | 6035 | 2233 | 3802 |
| 3 | ಬಳ್ಳಾರಿ | 1635 | 9080 | 10715 | 904 | 9811 |
| 4 | ಕಲಬುರ್ಗಿ | 581 | 864 | 1445 | 246 | 1199 |
| 5 | ಯಾದಗಿರಿ | 410 | 759 | 1169 | 165 | 1004 |
| 6 | ವಿಜಯಪುರ | 1964 | 2139 | 4103 | 754 | 3349 |
| 7 | ಬೆಳಗಾವಿ | 3600 | 1124 | 4724 | 1178 | 3546 |
| 8 | ದಾವಣಗೆರೆ | 0 | 1610 | 1610 | 468 | 1142 |
| 9 | ಶಿವಮೊಗ್ಗ | 0 | 24 | 24 | 2 | 22 |
| 10 | ಚಿತ್ರದುರ್ಗ | 0 | 406 | 406 | 150 | 256 |
| 11 | ಬಾಗಲಕೋಟೆ | 4804 | 3023 | 7827 | 1060 | 6767 |
| 12 | ಧಾರವಾಡ | 481 | 282 | 763 | 219 | 544 |
| 13 | ಗದಗ | 1407 | 1493 | 2900 | 1887 | 1013 |
| 14 | ಹಾವೇರಿ | 617 | 373 | 990 | 333 | 657 |
| | ಒಟ್ಟು | **22873** | **23787** | **46660** | **10570** | **36090** |

******